

ಬೆಳಗ್ಗೆ ಎಚ್ಚರವಾದಾಗ ಆಗಲೇ ಎಂಟು ಗಂಟೆ. ಮಂಚದಿಂದ ಚಂಗನೆದ್ದು ಹಲ್ಲುಜ್ಜಲು ಧಾವಿಸಿದೆ. ಮಹತ್ವದ ಮೀಟಿಂಗ್ ಒಂಬತ್ತೂವರೆಗೆ ಐಟಿ ಪಾರ್ಕ್ ತಲುಪಬೇಕು. ನಿನ್ನೆಯೇ ಬಾಸ್ ಎಚ್ಚರಿಸಿದ್ದರು, ಭಾರಿ ಮೊತ್ತದ ಅಕೌಂಟ್‌ನ ಹೇಗಾದರೂ ದಕ್ಕಿಸಿಕೊಳ್ಳಬೇಕೆಂದು. ನಾನು ಪಡಸಾಲೆಗೆ ಬಂದಾಗ ಕಾವ್ಯ ಟಿವಿಯಲ್ಲಿ ತಲ್ಲೀನಳಾಗಿದ್ದಳು, ಎಂದಿನ ನಿತ್ಯ ಭವಿಷ್ಯದ ರಗಳೆಯಲ್ಲಿ.

‘ಹಾಯ್ ಡಿಯರ್ ನಾನು ಬೇಗ ಹೋಗಬೇಕು ತುಂಬಾ ಜವಾಬ್ದಾರಿ ಮೀಟಿಂಗ್‌ಗಳು...’ ಕಾವ್ಯ ಕೈಸನ್ನೆಯಲ್ಲಿ ನನ್ನ ನಿಶಬ್ದವನ್ನು ಕೋರಿದಳು. ‘ಏನಂತಾ ಕೆಲಸಕ್ಕೆ ಬಾರದ ಜ್ಯೋತಿಷಗಳಲ್ಲಿ ಸಮಯ ವ್ಯರ್ಥ ಮಾಡ್ತೀ. ಇದರಿಂದೇನು ಲಾಭ? ಮುಖಕ್ಕೆ ಮೇಕಪ್ ಹೊಡೆದುಕೊಂಡು ಕ್ಯಾಮೆರಾದ ಮುಂದೆ ಈ ಭೂಪತಿಗಳು ಪ್ರಪಂಚದವರೆಲ್ಲರ ಭಾಗ್ಯ ನಿರ್ಧರಿಸಕ್ಕೆ ಕೂತಿದ್ದಾರೆ. ಇಂಥ ರಾಶಿಯವರಿಗೆ ಧನಲಾಭ, ಇಂಥ ರಾಶಿಯವರಿಗೆ ರಸ್ತೆ ಅಪಘಾತ.., ನಿನ್ನೆ ರಸ್ತೆ ಅಪಘಾತದಲ್ಲಿ ಸತ್ತವರೆಲ್ಲಾ ಒಂದೇ ರಾಶಿಯವರೇ ವಿಚಾರಣೆಯಾಗಬೇಕು’.

ಕಾವ್ಯ ಟಿವಿಯಿಂದೆದ್ದು ‘ಆಯ್ತಪ್ಪ ನಿಮ್ಮ ಟೀಕೆ ನಿಲ್ಲಿಸಲ್ಲ... ನೀವು ನನ್ನ ನೆಚ್ಚಿನ ಕಾರ್ಯಕ್ರಮಕ್ಕೆ ಅಡ್ಡಿ ಮಾಡಿದರೆ ‘ಟಾಟಾ ಬೈಬೈಯಂತ’ ಅಮ್ಮನ ಮನೆಗೆ ಹೊರಟು ಹೋಗ್ತೀನಿ ನೋಡಿ’ ಎಂದು ಮುನಿಸಿನಿಂದ ಅಡುಗೆ ಮನೆಗೆ ತೆರಳಿದಳು. ಸರ್ಕಾರ ‘ಅಂಧ ವಿಶ್ವಾಸ ನಿಷೇಧ’ ಕಾನೂನನ್ನು ಮಾಡಲು ಹೊರಟಿದ್ದು ಕೆಲವು ತಿಂಗಳುಗಳ ಹಿಂದೆ ಸುದ್ದಿಯಾಗಿತ್ತು. ಅದನ್ನು ಜಾರಿಗೆ ತಂದು ಈ ಭವಿಷ್ಯದ ಕಾರ್ಯಕ್ರಮಗಳನ್ನು ನಿಷೇಧ ಮಾಡಿದ್ದಲ್ಲಿ ನನ್ನಷ್ಟು ಸಂತೋಷ ಪಡುವ ವ್ಯಕ್ತಿ ಬೇರೊಬ್ಬರಿರಲ್ಲ. ಈ ಭವಿಷ್ಯದ ಹಾವಳಿಗಳಿಂದ, ಕಾವ್ಯ ತನ್ನ ಬಳಿ ಸುರಕ್ಷಿತವಾಗಿ ರಿಮೋಟ್ ಕಾಪಾಡಿಕೊಳ್ಳುತ್ತಿದ್ದರಿಂದ ನನಗೆ ಬೆಳಗ್ಗೆ ನ್ಯೂಸ್ ತಪ್ಪಿಹೋಗ್ತಿತ್ತು. ಕಾವ್ಯ ಕೊಟ್ಟ ಬಿಸಿಬಿಸಿ ಕಾಫಿ ಮತ್ತು ಬ್ರೆಡ್‌ಟೋಸ್ಟ್ ಸವಿಯುತ್ತಿದ್ದೆ. ‘ಡಾರ್ಲಿಂಗ್ ಏನು ಯೋಚಿಸಿದ್ದೀ ಆ್ಯನಿವರ್ಸರಿಗೆ ಬಂಡಿಪುರ್ ಗೋ ಇಲ್ಲಾ ಊಟೀಗೋ?’

‘ಯಾಕೋ ಎರಡೂ ಜಾಗಕ್ಕೂ ಮನಸು ಬರ್ತಿಲ್ಲ, ಮೊನ್ನೆ ತಾನೇ ನನ್ನ ಸ್ನೇಹಿತೆ ಗಂಡನೊಂದಿಗೆ ಹೋಗಿದ್ದಳು. ನಾವ್ಯಾಕೆ ಅಲ್ಲಿಗೇ ಹೋಗಬೇಕು ಕಾಪಿ ಚಿಟ್ ಮಾಡಿದ ಹಾಗೆ?’

‘ಸರಿಯಮ್ಮಾ.. ಎಲ್ಲಿಗೇಂಥ ಯೋಚಿಸಿಡು, ಬುಕ್ಕಿಂಗ್ ಮಾಡ್ತೀನಿ ಎರಡೇ ವಾರವಿರುವುದಲ್ಲಾ?’

‘ಓಕೆ ಬಾಸ್ ನಾವ್ಯಾಕೆ ಬ್ಯಾಂಕಾಕ್‌ಗೆ ಹೋಗಬಾರ್ದು, ಈಗೀಗ ತುಂಬಾ ಆಕರ್ಷಕ ಪ್ಯಾಕೇಜ್‌ಗಳಿವೆಯಂತೆ, ಭಾರೀ ಡಿಸ್ಕೌಂಟ್ ಇದ್ಯಂತೆ’.

ನಾನು ಕಾವ್ಯಳ ಕೈಹಿಡಿದು ಪ್ರೀತಿಯಿಂದ ‘ರಿಯಾಯತಿ ಎಲ್ಲಾ ಹನಿಮೂನ್ ಪ್ಯಾಕೇಜಿಗೆ ಗೊತ್ತಾ, ಹನಿಮೂನ್ ಅಂಥಾನೇ ಬುಕ್ಕಿಂಗ್ ಮಾಡಲಾ ಹಾಗಾದರೆ?’ ಎಂದು ಕಣ್ಣು ಮಿಟುಕಿಸಿದೆ. ಕಾವ್ಯ ಕೈಯನ್ನು ಹಿಂದಕ್ಕೆಳೆದು ‘ಹೋಗೀಪಾ, ಸದಾಶಿವನಿಗೆ ಅದೇ ಧ್ಯಾನ’ ಅನ್ನೋ ಹಾಗೇ ನಿಮಗೆ ಯಾವಾಗಲೂ ಅದೇ ವಿಚಾರ, ಬೇಗ ಹೋಗಬೇಕು ಅಂದವರು ಇಲ್ಲೇ ರೊಮ್ಯಾಂಟಿಕ್ ಆಗ್ತಿದ್ದೀರಿ?’ ನಾನು ಲಘುಬಗೆಯಿಂದ ನನ್ನ ಲ್ಯಾಪ್‌ಟಾಪ್ ಬ್ಯಾಗ್ ಹೆಗಲಿಗೇರಿಸಿ ಕಾವ್ಯಳಿಗೊಂದು ಹೂ ಮುತ್ತನಿತ್ತು ಹೊರಡಲನುವಾಗಿ ಎಂದಿನಂತೆ ಮುಖವನ್ನೂಡ್ಡಿದೆ, ಮಧುರ ನಿರೀಕ್ಷೆಯೊಂದಿಗೆ. ಮಡದಿಯಿಂದ ‘ರಿಟರ್ನ್ ಗಿಫ್ಟ್’ ಬರಲಿಲ್ಲವೆಂದು ಪ್ರಶ್ನಾತ್ಮಕವಾಗಿ ಹುಬ್ಬೇರಿಸಿದೆ. ‘ಇನ್ನು ಮೇಲೆ ರಿಟರ್ನ್ ಗಿಫ್ಟ್ ಇಲ್ಲ ನಿಮಗೆ, ಈಗ ಎರಡು ತಿಂಗಳಿಂದ ನಾನು ಕೆಲಸ ಬಿಟ್ಟು ಕುಳಿತಿರುವುದು ತುಂಬಾ ಸಲೀಸಾಗಿದೆ, ಡಿಮ್ಯಾಂಡ್‌ಗಳಿಗೆ ಕೊನೆಯೇ ಇಲ್ಲ’ ಎಂದು ಹುಸಿಮುನಿಸು ತೋರಿದಳು.

‘ಯಾಕೆ ಚಿನ್ನ ಏನಾಯ್ತು? ನಿಜ ಹೇಳಬೇಕೆಂದರೆ ಈಗ ಎರಡು ತಿಂಗಳಿಂದಲೇ ಹೊಸ ಅನುಭವ. ನಾನು ಕೆಲಸಕ್ಕೆ ಹೊರಟಾಗ ನೀನು ಟಾಟಾ ಬೈಬೈ ಮಾಡುವುದು ತುಂಬಾ ಸಂತೋಷವಾಗುತ್ತೆ, ಹಾಗೂ ದಿನಪೂರ್ತಿಯ ಚಟುವಟಿಕೆಗಳಿಗೆ ಟಾನಿಕ್ ಇದ್ದಂಗೆ, ಇನ್ನು ನಿನ್ನ ಬ್ಯಾಂಕ್‌ನ ಆರ್ಡರ್ ಬಂದರೆ ಮತ್ತೆ ಅದೇ ಯಾಂತ್ರಿಕತೆಗೆ ಮೊದಲಾಗುತ್ತೆ’.

ಕಾವ್ಯ ನನ್ನ ತಡೆದು ಹೇಳಿದಳು, ಹೆಂಡತಿನ ಗೇಲಿ ಮಾಡೋ ಜೋಕ್‌ಗಳು ಯಾಕೆ ವಾಟ್ಸಾಪ್ ಗ್ರೂಪ್‌ಗಳಲ್ಲಿ ಪೋಸ್ಟ್ ಮಾಡೋದು?’

‘ಯಾವ್ದು ಡಾರ್ಲಿಂಗ್? ಜ್ಞಾಪಕವಾಗ್ತಿಲ್ಲ’. ‘ನಿನ್ನೆ ದಸರಾ ರಾವಣ ದಹನದ ಬಗ್ಗೆ ಬಂದಿತ್ತಲ್ಲಾ? ರಾವಣನ ಪುತ್ಥಳಿಯನ್ನ ರಾಮ್‌ಲೀಲಾ ಮೈದಾನದಲ್ಲಿ ಸುಟ್ಟು ಹಾಕುತ್ತಿದ್ದಾಗ ರಾವಣ ಕೇಳ್ತಾನೆ ಜನನೆಲ್ಲಾ ‘ನನ್ನ ಯಾಕೆ ವರ್ಷ ವರ್ಷ ಈ ರೀತಿ ಸುಡುತ್ತಿದ್ದೀರಿ, ನಾನೇನು ನಿಮ್ಮ ಹೆಂಡತಿನ ಎತ್ತಿಕೊಂಡು ಹೋದ್ನಾ?’ ಅಂಥ ಅದಕ್ಕೆ ಜನ ‘ನನ್ನ ಹೆಂಡತಿನೇ ಯಾಕೆ ಎತ್ತಿಕೊಂಡು ಹೋಗಲಿಲ್ಲ ಅಂಥಾನೆ ನಿನ್ನ ಮೇಲೆ ಕೋಪಂಥಾ?’

‘ನಿಮಗೇನು ನನ್ನ ಯಾರಾದರೂ ಹಾರಿಸಿಕೊಂಡು ಹೋಗ್ಲೀಂಥನಾ?’

‘ಓ ಅದಾ ಅದೆಲ್ಲಾ ಹೀಗೆ ತಮಾಷೆ, ಟೈಂಪಾಸ್ ಅಷ್ಟೇ ಡಾರ್ಲಿಂಗ್’. ‘ನಿಜವಾಗ್ಲೂ ನನ್ನ ಯಾರಾದರೂ ಹಾರಿಸಿಕೊಂಡು ಹೋದ್ರೇನು ಮಾಡ್ತೀರಿ?’ ‘ಸುಮ್ಮನೆ ಬಿಡ್ತೀನಾ ಸರಿಯಾಗಿ ಮೈಮೂಳೆ ಮುರಿತೀನಿ’.

‘ಆಯ್ತಪ್ಪ ನೀವು ಹೊರಡಿ ಹೊತ್ತಾಗಲಿಲ್ಲವಾ? ನಿಮ್ಮ ಸಾಫ್ಟ್‌ವೇರ್ ಪೌರುಷವಲ್ಲಾ ಕಂಪ್ಯೂಟರ್ ಮುಂದೇನಂಥ ನಂಗೊತ್ತಿಲ್ಲವಾ?’ ನಾನು ಬೈಕ್ ಸ್ಟಾರ್ಟ್ ಮಾಡ್ತಿದ್ದಾಗ ಕಾವ್ಯ ಹೇಳ್ತಿದ್ದಳು ‘ನನ್ನ ಸ್ನೇಹಿತೆ ರೂಪನ ಎರಡನೇ ಮಗು ನಾಮಕರಣ, ಬೆಳಗ್ಗೆ ಕರೆದಿದ್ದಾಳೆ, ಹೋಗಿರ್ತೀನಿ. ಸಾಯಂಕಾಲ ಆಗತ್ತೆ ಬರೋದು’. ಕಾವ್ಯಳ ಸ್ವರದಲ್ಲಿ ಎರಡನೇ ಮಗು ಎನ್ನುವ ಪದ ಬೇಕಾದ್ದಕ್ಕಿಂತ ಒತ್ತುಕೊಟ್ಟಿದ್ದೋ? ಎನ್ನುವ ಸಂದೇಹ ಬಂತು.

ರೂಪ ಮತ್ತು ಕಾವ್ಯ ಬಾಲ್ಯಗೆಳತಿಯರು ಎರಡು ಮೂರು ತಿಂಗಳ ಅಂತರದಲ್ಲಿ ಮದುವೆಯಾದವರು, ಐದು ವರ್ಷಗಳ ಹಿಂದೆ. ಅವಳು ಎರಡು ಮಕ್ಕಳ ತಾಯಿ. ತಾನಿನ್ನೂ ಖಾತೆ ತೆರೆದಿಲ್ಲವೆನ್ನುವ ಭಾವನೆಯಿತ್ತೋ ಕಾವ್ಯಳ ಧ್ವನಿಯಲ್ಲಿ?. ಆದರೆ ದಾಂಪತ್ಯದ ಪ್ರಾರಂಭಿಕ ಸವಿಯನ್ನೂ ದೀರ್ಘವಾಗಿಸಲು, ಸಂತಾನವನ್ನು ಇಬ್ಬರೂ ಸ್ವಇಚ್ಛೆಯಿಂದ ಮುಂದೂಡಿದ್ದು, ಸಂಬಂಧಿಕರ ಸ್ನೇಹಿತರ ತನಿಖಾತ್ಮಕ ಪ್ರಶ್ನೆಗಳಿಗೆ ಆಹ್ವಾನ ನೀಡಿದಂತಾಗಿತ್ತು. ಸುಮಾರು ವರ್ಷದಿಂದ ಮಗುವಿನ ಯೋಜನೆ ಪ್ರಾರಂಭವಾಗಿದ್ದರ ಫಲಕಾರಿಯಾಗಿರಲಿಲ್ಲ ಎಂಬ ಆತಂಕವೇ ಕಾವ್ಯಳಿಗೆ?

ನನ್ನ ಬೈಕ್ ಮುಖ್ಯರಸ್ತೆಯಿಂದ ನಮ್ಮ ಬಡಾವಣೆಗೆ ತಿರುಗಿದಾಗ ರಾತ್ರಿ ಹನ್ನೊಂದಾಗಿತ್ತು. ಮಧ್ಯಾಹ್ನದ ನಂತರ ಕಾವ್ಯಳನ್ನು ಸಂಪರ್ಕಿಸಲಾಗಿರಲಿಲ್ಲ ಕೆಲಸದ ಅಧಿಕ ಒತ್ತಡದಿಂದ. ಆದರೆ ಕಾವ್ಯಳೇಕೆ ಕರೆ ಮಾಡಲಿಲ್ಲ? ಮುನಿಸಿ ಕೊಂಡಿರಬೇಕು. ನಾನು ಬಾಸ್ ರಜೆ ಮಂಜೂರು ಮಾಡಿಲ್ಲದಿರುವ ಮತ್ತು ಇವತ್ತು ದಕ್ಕಿಸಿಕೊಂಡ ಕರಾರಿನ ಕಾರ್ಯಾಚರಣೆಯಲ್ಲಿ ಕೆಲವು ವಾರಗಳು ವಿದೇಶಕ್ಕೆ ತೆರಳಬೇಕಾಗುವುದೆಂದು, ತಿಳಿಸಿದ್ದಕ್ಕೆ ಏನೊ? ಹೇಗೆ ಓಲೈಸಬೇಕೆಂದು ಯೋಚಿಸುತ್ತಾ ಮನೆ ತಲುಪಿದೆ. ಮನೆಯೊಳಗೆ ದೀಪವಿರಲಿಲ್ಲ. ಆಗಲೇ ಮಲಗಿದ್ದಾಳಾ ಅಥವಾ ತಲೆನೋವೇ? ಕೆಲವೊಮ್ಮೆ ತಲೆನೋವಿಂದ ಮಲಗಿದ್ದುಂಟು. ಕರೆಗಂಟೆಯನ್ನು ಹತ್ತಾರು ಬಾರಿ ಶಬ್ದ ಮಾಡಿದರೂ ಒಳಗೆ ಚಲನೆಯಿರಲಿಲ್ಲ. ನನ್ನ ಬಳಿಯಿದ್ದ ಎರಡನೇ ಬೀಗದಕ್ಕೆಯನ್ನು ಹಾಕಿ ತಿರುಗಿಸಿದಾಗ ಬಾಗಿಲು ತೆರೆದುಕೊಂಡಿತು. ಒಳಗಿನಿಂದ ಚಿಲಕ ಹಾಕಿರಲಿಲ್ಲ. ಮನೆಯೊಳಗೆ ದೀಪ ಬೆಳಗಿಸಿದೆ, ಬೆಡ್ ರೂಮ್‌ನಲ್ಲಿ ಇಣುಕಿದಾಗ ಮಂಚ ಖಾಲಿಯಿದ್ದದ್ದು ಕಂಡಿತು. ಸ್ನಾನದ ಕೋಣೆಯ ಬಾಗಿಲು ಗಮನಿಸಿದೆ, ಒಳಗಿರಬಹುದೆಂದು. ಹೊರಗಿನಿಂದ ಚಿಲಕ ಹಾಕಿತ್ತು. ‘ಕಾವ್ಯ ಕಾವ್ಯ’ ಎಂದು ಕರೆದೆ.. ನಿರುತ್ತರ. ಎರಡನೇ ಕೋಣೆ, ಅಡುಗೆ ಮನೆಗೆ ಹೋಗಿ ನೋಡ್ದೆ.. ಎಲ್ಲೂ ಕಾವ್ಯಳ ಸುಳಿವಿಲ್ಲ. ಎಲ್ಲಿ ಹೋದಳು?, ಅಥವಾ ಇನ್ನೂ ಬಂದಿಲ್ಲವಾ ಬೆಳಗ್ಗೆ ರೂಪನ ಮನೆಗೆ ಹೋದವಳು?.... ಆತಂಕದಿಂದ ಮನೆಯನ್ನು ಗಮನಿಸಿದೆ. ಎಲ್ಲಾ ಎಂದಿನಂತೆಯೇ ಯಥಾ ಸ್ಥಳದಲ್ಲಿತ್ತು. ಮತ್ತೊಮ್ಮೆ ಮನೆಯೆಲ್ಲಾ ಸೂಕ್ಷ್ಮವಾಗಿ ಗಮನಿಸಿದೆ. ಅಡುಗೆಕೋಣೆಯ ಸಿಂಕ್‌ನಲ್ಲಿ ಪಾತ್ರೆಗಳನ್ನು ಗಮನಿಸಿದೆ. ತೊಳೆದ ಪಾತ್ರೆಗಳು ಅದರದರ ಜಾಗದಲ್ಲಿ ಜೋಡಿಸಿಟ್ಟಿದ್ದವು. ಯಾವುದೂ ಉಪಯೋಗಿಸಿರಲಿಲ್ಲ. ಅಲ್ಲಿಗೆ ಕಾವ್ಯ ಬೆಳಗ್ಗೆ ಹೋದವಳು ಹಿಂತಿರುಗಿ ಬಂದಂತಿಲ್ಲವೆನಿಸಿತು.

ಮುಂದೇನು ತೋಚದೆ ಸೆಲ್ ತೆಗೆದು ಕಾವ್ಯಳಿಗೆ ಕರೆ ಮಾಡಿದೆ. ಸ್ವಿಚ್ ಆಫ್ ಸೂಚನೆ ಬಂತು. ಇದೇನು? ರೂಪಳಿಗೆ ಕರೆ ಮಾಡ್ದೆ. ‘ಹಲೋ ರೂಪಾ ನಾನು ಪಂಕಜ್. ಕಾವ್ಯ ಇದ್ದಾಳಾ?’

‘ಕಾವ್ಯನಾ... ಮಧ್ಯಾಹ್ನವೇ ಊಟ ಮುಗಿಸಿಕೊಂಡು ಹೊರಟಳಲ್ಲಾ?’ ‘ಹೌದಾ ಮನೇಲಿರಲಿಲ್ಲ. ಅವಳ ಸೆಲ್ ಆಫ್‌ನಲ್ಲಿದೆ, ಸಂಪರ್ಕವಾಗ್ತಿಲ್ಲ. ಅಲ್ಲಿಂದ ಎಲ್ಲಿಗೆ ಹೋಗ್ತೀನಿ ಅಂಥ ಹೇಳಿದಳಾ?’

‘ಇಲ್ಲ ಪಂಕಜ್.. ಮನೆಗೇ ಹೊರಟಿರಬೇಕು, ಯಾಕೆ ಮಧ್ಯಾಹ್ನದಿಂದ ನೀವು ಸಂಪರ್ಕದಲ್ಲಿರಲಿಲ್ಲವಾ?’

ಅಲ್ಲೇ ಕುರ್ಚಿಯಲ್ಲಿ ಕುಸಿದೆ. ಸೆಲ್‌ನಲ್ಲಿ ಆತುರದಿಂದ ಮೆಸೇಜ್‌ಗಳು, ವಾಟ್ಸಪ್‌ನಲ್ಲಿ ಏನಾದರೂ ಕಾವ್ಯಳ ಸೂಚನೆಯಿದೆಯಾ ಎಂದು ಹುಡುಕಿದೆ. ಕಾವ್ಯಳ ಅಕೌಂಟ್‌ಗೇ ಹೋಗಿ ವಾಟ್ಸಪ್‌ನಲ್ಲಿ ಗಮನಿಸಿದೆ. ಅವಳ ಸೆಲ್ ಆಫ್ ಇದೆಯೆಂದು ತಿಳಿಯಿತು. ನಾವಿಬ್ಬರೂ ಇದ್ದ ಗ್ರೂಪ್‌ಗಳಲ್ಲಿ ಗಮನಿಸಿದೆ. ಬೆಳಗ್ಗೆಯಿಂದ ಕಾವ್ಯಳ ಯಾವುದೇ ಚಟುವಟಿಕೆಗಳಿರಲಿಲ್ಲ. ಮನೆಯೆಲ್ಲಾ ಮತ್ತೊಮ್ಮೆ ಸುತ್ತಾಡಿ ಸೂಕ್ಷ್ಮವಾಗಿ ಗಮನಿಸುವ ಪ್ರಯತ್ನ ಮಾಡಿದೆ, ಏನಾದರೂ ಚೀಟಿ, ಸೂಚನೆ ಪತ್ರಗಳಿದೆಯೇ ಎಂದು. ಏನೂ ಸಿಗಲಿಲ್ಲ. ಏನೋ ಯೋಚನೆ ಬಂದು ನಮ್ಮ ಕೋಣೆಗೆ ಹೋಗಿ ಅಲ್ಮೆರಾ ತೆಗೆದು ನೋಡಿದೆ, ಕಾವ್ಯಳ